Karnatak Law Society's
**Vishwanathrao Deshpande Institute of Technology**
**(Approved by AICTE, New Delhi. Affiliated to VTU, Belagavi)**
**(Recognised Under Section 2(f) by UGC, New Delhi)**
**Udyog Vidya Nagar, Haliyal – 581329, Dist: Uttar Kannada (Karnataka)**
**Phone: 08284-220861, 220334, 221409, Fax: 08284-220813**
www.klsvdit.edu.in principal@klsvdit.edu.in

Date: 17-11-2022

**ಪತ್ರಿಕಾ ಪ್ರಕಟಣೆ:**

# ವಿ.ಡಿ.ಐ.ಟಿ. ವಿದ್ಯಾರ್ಥಿಗಳ ಯೋಜನಾ ಕಾರ್ಯಕ್ಕೆ ಡಾ. ಸಿ. ಎನ್. ಅಶ್ವಥ್ ನಾರಾಯಣ್ ಪ್ರಶಂಸೆ

ಬೆಂಗಳೂರಿನಲ್ಲಿ ನಡೆಯುತ್ತಿರುವ ಏಷ್ಯಾದ ಅತೀ ದೊಡ್ಡ ತಾಂತ್ರಿಕ ಶೃಂಗಸಭೆಯಲ್ಲಿ ಕೆ.ಎಲ್.ಎಸ್. ವಿ.ಡಿ.ಐ.ಟಿ, ಹಳಿಯಾಳದ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಸಿದ್ಧಪಡಿಸಿರುವ ಎರಡು ಯೋಜನಾ ಕಾರ್ಯಗಳು ನವೆಂಬರ್ 16 ರಿಂದ 18ರ ವರಿಗೆ ಪ್ರದರ್ಶನಗೊಳ್ಳಲಿದೆ. ಕರ್ನಾಟಕ ಸರಕಾರದ ಕೆ –ಟೆಕ್ ನೈನ್ ಯೋಜನೆಯ ಧನಸಹಾಯದ ಅಡಿಯಲ್ಲಿ ವಿದ್ಯಾರ್ಥಿಗಳು ಸಿದ್ಧಪಡಿಸಿರುವ ಸ್ವಯಂ ಚಾಲಿತ ಚಾಲನಾ ಪರವಾನಿಗೆ ನೀಡುವ ವ್ಯವಸ್ಥೆ ಮತ್ತು ಚಿತ್ರ ಸಂಸ್ಕರಣಾ ತಂತ್ರಜ್ಞಾನದ ಮೂಲಕ ದಾಳಿಂಬೆ ಗಿಡದ ಎಳೆಯ ರೋಗಗಳ ಪತ್ತೆ ಹಚ್ಚುವ ಯೋಜನಾ ಕಾರ್ಯವನ್ನು ರಾಜ್ಯ ಸರಕಾರದ ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ ಮತ್ತು ಐಟಿ ಬಿಟಿ ಇಲಾಖೆಯ ಸಚಿವರಾದ ಸನ್ಮಾನ್ಯ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಅವರು ವೀಕ್ಷಿಸಿ ಪ್ರಶಂಸಿಸಿದ್ದಾರೆ. ಶೃಂಗ ಸಭೆಯ ಕೌಶಲ್ಯ ವಿಭಾಗದ ಮುಖ್ಯಸ್ಥರಾದ ಡಾ.ಸಂಧ್ಯಾ ಅನ್ವೇಕರ್ ಮತ್ತು ಶ್ರೀ.ಮೋಹನ್ ಅವರು ಸಹ ವಿದ್ಯಾರ್ಥಿಗಳ ಯೋಜನಾ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.ಕುಮಾರಿ. ಸ್ವಾತಿ ಜೋಶಿ, ಕು. ರಘುನಂದನ, ಕು. ಕೇಶವ್ ಇವರುಗಳು ಪ್ರೊ. ಭಾನುಪ್ರಿಯ ಅವರ ನೇತೃತ್ವದಲ್ಲಿ ಮಹಾವಿದ್ಯಾಲಯವನ್ನು ಪ್ರತಿನಿಧಿಸಿದ್ದಾರೆ. ವಿದ್ಯಾರ್ಥಿಗಳ ಯೋಜನಾ ಕಾರ್ಯಗಳು ಬೆಂಗಳೂರಿನ ತಾಂತ್ರಿಕ ಶೃಂಗಸಭೆಯ 25ನೇ ಆವೃತ್ತಿಯಲ್ಲಿ ಪ್ರದರ್ಶನಗೊಂಡಿರುವುದಕ್ಕೆ ಮಹಾವಿದ್ಯಾಲಯದ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ.ವಿನಾಯಕ ಲೋಕೂರ್, ಪ್ರಾಚಾರ್ಯರಾದ ಡಾ.ವಿ.ಎ.ಕುಲಕರ್ಣಿ, ಯೋಜನಾ ಕಾರ್ಯದ ಮಾರ್ಗದರ್ಶಕರಾದ ಡಾ.ಮಹೇಂದ್ರ ದೀಕ್ಷಿತ್ ಮತ್ತು ಪ್ರೊ.ವರಪ್ರಸಾದ ಜಿ ಹಾಗೂ ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಪ್ರಾಂಶುಪಾಲರು

**Principal**
**KLS Vishwanathrao Deshpande Institute of Technology, Haliyal**


STARTUP
KARNATAKA
NEW AGE
INNOVATION
NETWORK
KLS VDIT
TRANSFORMING THROUGH TECHNOLOGY
BENGALURU TECH SUMMIT 2022
BENGALURU
TECH SUMMIT
BANGALORE PALACE
KLS VDIT
HALIYAL